ಇಂದು ಸಾಮಾಜಿಕ ಜಾಲತಾಣ ಇನ್ನಷ್ಟು ಜನಪ್ರಿಯವಾಗಿದೆ. ಪ್ರತಿ ನಗರಗಳಲ್ಲೂ ಹದಿಹರೆಯದವರು ಮೋನಿಕಾಳಂತೆಯೇ ಭಿನ್ನ ಘಟನೆಗಳಿಗೆ ಸಾಕ್ಷಿಯಾಗುತ್ತಲೇ ಇದ್ದಾರೆ. ಫೇಸ್‌ಬುಕ್, ಟ್ವಿಟ್ಟರ್, ಇನ್‌ಸ್ಟಾಗ್ರಾಂ, ವಾಟ್ಸ್ ಆ್ಯಪ್, ಯುಟ್ಯೂಬ್‌ನಲ್ಲಿ ಬಹಿರಂಗವಾಗಿ ತೇಜೋವಧೆಗಳು ನಡೆಯುತ್ತಿವೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಹೆಜ್ಜೆಯನ್ನೂ ಕ್ಲಿಕ್ಕಿಸುತ್ತಾ ವೈಭವೀಕರಿಸುವುದೇ ಪ್ರತಿಷ್ಠೆಯಾಗಿದೆ. ಕೆಲವರಿಗಂತೂ ತಿಂಡಿ ತಿನ್ನುವುದು, ಊಟ ಮಾಡುವುದು, ಕುಳಿತುಕೊಳ್ಳುವ ಭಂಗಿ, ಹಾಕಿರುವ ಹೊಸ ಬಟ್ಟೆ, ಸಂಭ್ರಮಾಚರಣೆ, ಶೋಕಾಚರಣೆ ಇವೆಲ್ಲವೂ ವಾಟ್ಸ್ಯಾಪ್‌ನಲ್ಲಿ ಬರಲೇಬೇಕು! ಪೈಪೋಟಿಯ ಮೇಲೆ ವೈಯಕ್ತಿಕ ವಿಚಾರಗಳು ಬಹಿರಂಗಗೊಳ್ಳುತ್ತಿವೆ. ಕೊಂಚ ಎಡವಿದರೂ ಸಾಕು, ಇನ್ನೆಂದೂ ಮೇಲೇಳದ ಹಾಗೆ ಬದುಕು ಛಿದ್ರವಾಗಿ ಹೋಗುತ್ತದೆ.

ಸುಧಾಕರನ ಮನೆಯಲ್ಲಿ ಹುಡುಗಿ ಹುಡುಕಾಟದಲ್ಲಿದ್ದರು. ಹತ್ತಿರದ ನೆಂಟರೊಬ್ಬರು ತೋರಿಸಿದ ಹುಡುಗಿ ಎಲ್ಲರಿಗೂ ಅದೆಷ್ಟು ಹಿಡಿಸಿದ್ದಳೆಂದರೆ, ಮನೆಯವರೆಲ್ಲ ಇನ್ನೇನು ಒಪ್ಪಿಗೆ ಸೂಚಿಸಬೇಕೆಂದು ಸಂಭ್ರಮದಲ್ಲಿದ್ದರು. ಆದರೆ, ಸುಧಾಕರ ನಿರಾಕರಿಸಿಬಿಟ್ಟ. 'ಹುಡುಗಿಯ ಫೇಸ್ಬುಕ್ ಅಕೌಂಟ್ ನೋಡಿದ್ದೇನೆ. ಹುಡುಗರೊಂದಿಗೆ ಇರುವ ಸಾಕಷ್ಟು ಫೋಟೋಗಳಿವೆ. ಅವುಗಳಿಗೆ ಹುಡುಗರೇ ಹೆಚ್ಚು ಕಾಮೆಂಟ್ ನೀಡಿದ್ದಾರೆ. ಇಷ್ಟು ಫಾರ್ವರ್ಡ್ ಹುಡುಗಿ ನನಗೆ ಬೇಡ' ಎಂದು ಬಿಟ್ಟ. ಕೇವಲ ಸ್ನೇಹಿತರೊಂದಿಗಿನ ಛಾಯಾಚಿತ್ರ ಹಾಗೂ ಯಾರೋ ಮಾಡಿದ ಕಾಮೆಂಟ್‌ಗಳನ್ನು ನೋಡಿದ ಸುಧಾಕರ ಹುಡುಗಿಯ ನಡತೆಯನ್ನೇ ಅನುಮಾನಿಸಿದ. ಅವರ ಅಭಿಪ್ರಾಯಗಳು ಅವರ ಮನೆಯಲ್ಲಿಯೇ ಇದ್ದಿದ್ದರೆ, ಅಷ್ಟೆಲ್ಲ ಸಮಸ್ಯೆಯಾಗುತ್ತಿರಲಿಲ್ಲ. ಸುದ್ದಿ ರೆಕ್ಕೆಪುಕ್ಕದೊಂದಿಗೆ ಹುಡುಗಿಯ ಪೋಷಕರಿಗೂ ತಲುಪಿತು. ಕೇವಲ ಫೋಟೋ ಹಾಕಿದ್ದಕ್ಕಾಗಿ ಹುಡುಗಿಗೆ ಮನೆಯಿಂದ ಹೊರಗೆ ಕಾಲಿಡದಂತೆ ದಿಗ್ಬಂಧನದ ಶಿಕ್ಷೆಯಾಯಿತು.

ಸಾಮಾಜಿಕ ಜಾಲತಾಣಗಳಲ್ಲಿ ಅರಿವಿದ್ದೋ ಅಥವಾ ಅರಿವಿಲ್ಲದೆಯೋ ಸ್ಟೇಟಸ್‌ಗಳು ಅಪ್‌ಡೇಟ್ ಆಗುತ್ತಿರುತ್ತವೆ. ಆದರೆ, ಅಪ್‌ಡೇಟ್ ಹೆಸರಿನಲ್ಲಿ ವೈಯಕ್ತಿಕವಾಗಿ ಅದೆಷ್ಟು ಬೆತ್ತಲಾಗಿರುತ್ತೇವೆ ಎಂದರೆ, ಅಹಿತಕರ ಘಟನೆಗಳು ನಡೆದ ಮೇಲೆ, ಕೈ ಹಿಸುಕಿಕೊಳ್ಳುವ ಪರಿಸ್ಥಿತಿ. ಅಷ್ಟರಲ್ಲಾಗಲೇ ನೂರಾರು ಮಂದಿ ನೋಡಿಯಾಗಿರುತ್ತದೆ. ಇನ್ನಿತರರಿಗೂ ಶೇರ್ ಆಗಿರುತ್ತದೆ. ಸಕಾರಾತ್ಮಕ ವಿಷಯಗಳಿಗಿಂತ ನಕಾರಾತ್ಮಕ ವಿಷಯಗಳು ಜನರನ್ನು ಬಲುಬೇಗ ತಲುಪುತ್ತವೆ.

'ಸೈಬರ್ ಬುಲ್ಲಿಂಗ್' (ಜಾಲತಾಣದ ಗೂಂಡಾಗಿರಿ)ಗೆ ಬಲವಾದ ಕಾರಣಗಳೇ ಬೇಕು ಎಂದಿಲ್ಲ. ನಕಲಿ ಎಕೌಂಟ್‌ನಿಂದ ಅಶ್ಲೀಲ ಸಂದೇಶ ರವಾನಿಸುವವರಿದ್ದಾರೆ. ಯಾರದೋ ಹೆಸರಿನಲ್ಲಿ ಎಕೌಂಟ್ ಸೃಷ್ಟಿಸಿ, ಅವರ ಆಪ್ತರಿಗೆಲ್ಲ ಇಲ್ಲಸಲ್ಲದ ಸಂದೇಶ ಕಳುಹಿಸುವವರಿದ್ದಾರೆ. ಛಾಯಾಚಿತ್ರಗಳನ್ನು ಅಶ್ಲೀಲವಾಗಿ ಮರುಸೃಷ್ಟಿಸಿ ಹರಿಬಿಡುವವರಿದ್ದಾರೆ. ಖಾಸಗಿ ಜೀವನ ಚಿತ್ರೀಕರಣ ಮಾಡಿ ಹಾಕುವವರಿದ್ದಾರೆ. ತಮ್ಮ ಜೀವನ ಬೇಸರವಾಗಿದೆ ಎಂದು ಇತರರ ಜೀವನದಲ್ಲಿ ಆಟವಾಡಿ ಮನೋರಂಜನೆ ತೆಗೆದುಕೊಳ್ಳುವವರಿದ್ದಾರೆ. ಅಷ್ಟೇ ಅಲ್ಲ, ಪರಿಚಯಸ್ಥರೇ ವೈಯಕ್ತಿಕ ವಿಚಾರಕ್ಕಾಗಿ ಇಲ್ಲಸಲ್ಲದ ಸಂದೇಶ ಕಳುಹಿಸಿ ಅವಮಾನಿಸುವುದೂ ಇದೆ. ಜೊತೆಗೆ ಭಗ್ನ ಪ್ರೇಮಿಗಳ ಆಟಾಟೋಪ ಬೇರೆ!

ಅಮೆರಿಕಾದಲ್ಲಿ ಹದಿನೈದರ ಯುವತಿಯೋರ್ವಳು ಏಕಾಏಕಿ ಆತ್ಮಹತ್ಯೆ ಮಾಡಿಕೊಂಡಳು. ಕಾರಣ ತಿಳಿಯದೇ ಪೋಷಕರು ಚಿಂತೆಗೀಡಾಗಿದ್ದರು. ಅವಳ ಸಲುಗೆಯನ್ನು ದುರುಪಯೋಗ ಪಡಿಸಿಕೊಂಡ ಸ್ನೇಹಿತನೋರ್ವ ಸಾಮಾಜಿಕ ಜಾಲತಾಣಗಳಲ್ಲಿ ಅವರ ಖಾಸಗಿ ವಿಷಯ ಬಹಿರಂಗ ಪಡಿಸಿದ್ದೇ ಆತ್ಮಹತ್ಯೆಗೆ ಕಾರಣವಾಯಿತು. ಅವಳ ಆಪ್ತರ ವಿಚಾರಣೆ ನಡೆಸಿದ ಬಳಿಕ ವಿಷಯ ಬೆಳಕಿಗೆ ಬಂತು. ಪೋಷಕರಿಗೆ ತಿಳಿಯುವಷ್ಟರಲ್ಲಿ ಪರಿಸ್ಥಿತಿ ಕೈ ಮೀರಿ ಹೋಗಿತ್ತು. ಕೇವಲ ಮಹಿಳೆಯರಷ್ಟೇ ಅಲ್ಲ, ಪುರುಷರೂ ಅದೆಷ್ಟೋ ಅಪಮಾನಗಳಿಗೆ ಬಲಿಯಾಗಿದ್ದಾರೆ.

ಆನ್‌ಲೈನ್ ಕಿರುಕುಳಕ್ಕೆ ಯುವಪೀಳಿಗೆಯೇ ಹೆಚ್ಚು ಬಲಿಯಾಗುತ್ತಿದೆ. ಇದರ ಪರಿಣಾಮವೂ ಗಂಭೀರ ಸ್ವರೂಪ ತಾಳುತ್ತಿದೆ. ಅಪಮಾನ ಸಹಿಸಲಾಗದೆ, ಕೆಲವರು ಡಿಪ್ರೆಷನ್‌ಗೆ ಒಳಗಾಗಿದ್ದಾರೆ. ಅವಮಾನದಿಂದಾಗಿ ತಮ್ಮ ಜೀವನದ ಗುರಿ ಬದಲಾಯಿಸಿದವರೂ ಇದ್ದಾರೆ, ಊರು ಬಿಟ್ಟು ಹೊರಟವರಿದ್ದಾರೆ. ಕಿರುಕುಳದಿಂದ ಬೇಸತ್ತು, ಜೀವನದ ಮೇಲೆ ನಂಬಿಕೆಯನ್ನೇ ಕಳೆದುಕೊಂಡವರಿದ್ದಾರೆ. ವಿಪರೀತಕ್ಕೆ ಹೋಗಿ, ಜೀವ ಕಳೆದುಕೊಂಡವರೂ ಇದ್ದಾರೆ. ಚಿಕ್ಕಮಗಳೂರಿನ ವಿದ್ಯಾರ್ಥಿನಿಯೊಬ್ಬಳ ಆತ್ಮಹತ್ಯೆ ಇದಕ್ಕೆ ಇತ್ತೀಚಿನ ತಾಜಾ ಉದಾಹರಣೆ.

ಸಾಮಾಜಿಕ ಕ್ಷೇತ್ರಗಳಲ್ಲಿ ಗುರುತಿಸಿಕೊಂಡವರೂ ಇದರಿಂದ ಹೊರತಾಗಿಲ್ಲ. ರಾಜಕೀಯ ಮುಖಂಡರು, ಚಲನಚಿತ್ರ ನಟ– ನಟಿಯರು, ಬರಹಗಾರರು, ಸಂಗೀತಗಾರರು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಖ್ಯಾತನಾಮರು ತೀರ ಹತ್ತಿರದಿಂದ ಸೈಬರ್ ಬುಲ್ಲಿಂಗ್ ಅಥವಾ ಟ್ರೋಲಿಂಗ್ ಅನ್ನು ನೋಡಿದ್ದಾರೆ. ಕೆಲವರಂತೂ ದಿನನಿತ್ಯ ಅಪಮಾನ ಸಹಿಸಿಕೊಂಡೇ ಬಾಳುವುದನ್ನು ಕಲಿತಿದ್ದಾರೆ. ಇದಕ್ಕೆ ಪೂರ್ಣವಿರಾಮ ನೀಡುವುದು ಬಲುಕಷ್ಟ. ಏಕೆಂದರೆ, ಸಾಮಾಜಿಕ ಜಾಲತಾಣ ಒಂದು ದೇಶದ ಗಡಿಯ ಮೇಲೆ ಅಥವಾ ಯಾವುದೋ ಒಂದು ಲಕ್ಷ್ಮಣ ರೇಖೆಯ ಒಳಗೆ ಕಾರ್ಯ ನಿರ್ವಹಿಸುವುದಿಲ್ಲ. ಒಂದೊಂದು ಸಾಮಾಜಿಕ ಜಾಲತಾಣಗಳು ಒಂದೊಂದು ದೇಶದಿಂದ ಕಾರ್ಯ ನಿರ್ವಹಿಸುತ್ತಿರುತ್ತವೆ. ಪ್ರತಿ ದೇಶದಲ್ಲಿ ಆಯಾ ಕಂಪನಿಗಳ ಪ್ರತಿನಿಧಿಗಳು ಇದ್ದರೂ, ಸೈಬರ್ ಬುಲ್ಲಿಂಗ್ ವಿಷಯದಲ್ಲಿ ಅದೆಷ್ಟು ಕಾರ್ಯ ಪ್ರವೃತ್ತರಾಗಿರುತ್ತಾರೆ ಎಂಬುದು ಪ್ರಶ್ನಾರ್ಹ.

ಈ ಎಲ್ಲ ನಕಾರಾತ್ಮಕ ಅಂಶಗಳಿಂದಾಗಿ ಸಾಮಾಜಿಕ ಜಾಲತಾಣಗಳನ್ನು ಬಿಟ್ಟುಬಿಡಬೇಕೆಂದಿಲ್ಲ. ಅವುಗಳನ್ನು ಭದ್ರತೆಯಿಂದ ಹೇಗೆ ನೋಡಿಕೊಳ್ಳಬೇಕು ಎಂಬುದು ಅರಿತಿರಬೇಕು.

## ಇಲ್ಲಿದೆ ಕೆಲವು ಟಿಪ್ಸ್‌ಗಳು:

★ ಹ್ಯಾಕ್ ಮಾಡಲು ಕಷ್ಟಕರವಾದ ಹಾಗೂ ಊಹಿಸಲು ಅಸಾಧ್ಯವಾದ ಸೂಕ್ತ ಪಾಸ್‌ವರ್ಡ್‌ಗಳನ್ನು ಅಳವಡಿಸಿಕೊಳ್ಳಿ.
★ ಪಾಸ್‌ವರ್ಡ್‌ಗಳನ್ನು ಸದಾ ಗುಪ್ತವಾಗಿಡಿ. ಆಪ್ತರೊಂದಿಗೂ ಹಂಚಿಕೊಳ್ಳಬೇಡಿ.
★ ಯಾರಿಗಾದರೂ ಪಾಸ್‌ವರ್ಡ್ ತಿಳಿದಿದೆ ಎಂದಾದರೆ, ತಕ್ಷಣ ಹೊಸ ಪಾಸ್‌ವರ್ಡ್ ಅಳವಡಿಸಿ. ಆಗಾಗ ಪಾಸ್‌ವರ್ಡ್ ಬದಲಾಯಿಸಿ.
★ ಜಾಲತಾಣಗಳಲ್ಲಿ ವೈಯಕ್ತಿಕ ವಿಚಾರಗಳನ್ನು ಹರಿಬಿಡುವ ಮುನ್ನ, ಮುಕ್ತವಾಗಿ ಪ್ರಕಟಿಸುವುದು ಎಷ್ಟು ಸೂಕ್ತ ಎಂಬುದನ್ನು ಯೋಚಿಸಿ.

ಸಾಮಾಜಿಕ ಜಾಲತಾಣಗಳಲ್ಲಿ ಬೆದರಿಕೆ ಒಡ್ಡುವವರು, ಅಶ್ಲೀಲ ಸಂದೇಶ ಕಳುಹಿಸುವವರು ಅಥವಾ ತೇಜೋವಧೆ ಮಾಡುವವರು ಎದುರಾದರೆ, ಅವರನ್ನು ನಿರ್ದಾಕ್ಷಿಣ್ಯವಾಗಿ 'ಬ್ಲಾಕ್' ಮಾಡಿ ರಿಪೋರ್ಟ್ ಮಾಡಬಹುದು. ಇಷ್ಟಾದರೂ, ಸೈಬರ್ ಬುಲ್ಲಿಂಗ್ ನಡೆಯುತ್ತಿದ್ದರೆ, ಸಾಕ್ಷಿಗಳನ್ನು ನಾಶಪಡಿಸದೇ, ಪೊಲೀಸ್ ಕಂಪ್ಲೇಂಟ್ ನೀಡಬಹುದು.

ಈಗಾಗಲೇ ವಿವಿಧ ದೇಶಗಳಲ್ಲಿ ಸೈಬರ್ ಬುಲ್ಲಿಂಗ್ ಕುರಿತು ಸಂಘಟನೆ ಹಾಗೂ ಆಂದೋಲನಗಳು ನಡೆಯುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಹೇಗೆ ಜಾಗರೂಕರಾಗಿರಬೇಕು ಎಂಬುದರ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಜೊತೆಗೆ ಸೈಬರ್ ಬುಲ್ಲಿಂಗ್‌ಗೆ ಕಡಿವಾಣ ಹಾಕಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಕೆಲ ದೇಶಗಳು ಕಠಿಣ ಕಾನೂನನ್ನು ರೂಪಿಸುತ್ತಿವೆ. ಆದರೂ, ಬಳಕೆದಾರರ ಸ್ವನಿಯಂತ್ರಣವಿಲ್ಲದೇ ಜಾಲತಾಣಗಳಲ್ಲಿ ನಡೆಯುವ ಅಪರಾಧಗಳನ್ನು ಸಂಪೂರ್ಣವಾಗಿ ಅಳಿಸಿಹಾಕುವುದು ಕಷ್ಟ.

ಅಂದ ಹಾಗೆ, ಅಮೆರಿಕಾದ ಅಧ್ಯಕ್ಷರ ಹೆಸರಿನೊಂದಿಗೆ ತಳುಕು ಹಾಕಿಕೊಂಡಿದ್ದ ಮೋನಿಕಾ ಲೆವೆನ್ಸ್ಕಿ, ಘಟನೆಯ ಆಘಾತದಿಂದ ಹೊರಬರಲು ಸಾಕಷ್ಟು ಸಮಯ ತೆಗೆದುಕೊಂಡಳಂತೆ. ಯಾವುದೇ ಕೆಲಸ ಹಿಡಿದರೂ ಕೈಗೂಡದೇ, ಎಲ್ಲೇ ಹೋದರೂ ಮಾಧ್ಯಮಗಳನ್ನು ಎದುರಿಸಿ ಟೀಕೆಗಳಿಗೆ ಗುರಿಯಾಗುತ್ತಾ, ಕೇಳುವ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಆಕೆ ಪರದೆಯ ಹಿಂದೆ ಸರಿದಿದ್ದಳು. ಘಟನೆ ನಡೆದು 20 ವರ್ಷಗಳ ಬಳಿಕ ಈಗ ಜೀವನ ಸುಧಾರಿಸಿಕೊಂಡಿದ್ದಾಳೆ. '22ರ ಹರೆಯದಲ್ಲಿ ಎಡವುದು ಸಹಜ. ಅದರಲ್ಲೂ ಸುಂದರ ವ್ಯಕ್ತಿತ್ವದ ಅಮೆರಿಕದ ಅಧ್ಯಕ್ಷರೇ ಎದುರು ಬಂದಾಗ ಮನಸೋಲುವುದು ತಪ್ಪಲ್ಲ. ಹರೆಯದಲ್ಲಾದ ಕಹಿಘಟನೆಯನ್ನು ನಾನು ಒಪ್ಪಿಕೊಂಡಿದ್ದೇನೆ. ಅವಮಾನದೊಂದಿಗೆ ಬದುಕುವುದನ್ನು ಕಲಿತಿದ್ದೇನೆ' ಎನ್ನುವ ಮೋನಿಕಾ, ಸಮಾನ ಮನಸ್ಕರನ್ನು ಸಂಘಟಿಸಿ 'ಸೈಬರ್ ಬುಲ್ಲಿಂಗ್' ಮತ್ತು 'ಆನ್ ಲೈನ್ ಕಿರುಕುಳ'ದ ವಿರುದ್ಧ ಹೋರಾಡುತ್ತಿದ್ದಾಳೆ. ●